ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಹೌದು.

ಆ) ಯಾದಗಿರಿ ಜಿಲ್ಲೆಯಲ್ಲಿ ಜಿಲ್ಲಾ ಸಂಕೀರ್ಣ ಕಛೇರಿ ಕಟ್ಟಡ ಕಾಮಗಾರಿಯು ಸರ್ಕಾರದ ಆದೇಶ ಸಂಖ್ಯೆ: ಕಂಷ 26 ಡಬ್ಲ್ಯೂಬಿಎಲ್ 2012, ದಿನಾಂಕ: 14.08.2013ರಲ್ಲಿ ಅನುಮೋದನೆಗೊಂಡಿರುತ್ತದೆ. ಪ್ರಥಮ ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಇ) 1ನೇ ಹಂತದ ಕಾಮಗಾರಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆದು ಕೈಗೆತ್ತಿಕೊಳ್ಳಲಾಗಿದ್ದು, ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿಯು ದಿನಾಂಕ: 14.11.2014ಕ್ಕೆ ಪೂರ್ಣಗೊಳ್ಳಲಿದೆ.

ಈ) ಉದ್ಭವಿಸುವುದಿಲ್ಲ.

ಜಮೀನುಗಳಿಗೆ ಖಾತೆಗಳನ್ನು ಮಾಡಿರುವುದು

1058 (1162); ಡಾ॥ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದ ಕಳೆದ 3 ವರ್ಷಗಳಿಂದ ಖಾತೆಗಳನ್ನು ಕಾಯಂ ರೀತಿಯಲ್ಲಿ ಮಾಡಲಾಗಿದೆ. ಅದರ ಪ್ರಮಾಣ ಎಷ್ಟು;

ಆ) ಈ ಜಮೀನಿಗೆ ಸರ್ಕಾರದಿಂದ ಮಂಜೂರಾದ ದರಖಾಸ್ತು ಮತ್ತು ಇನಾಮತಿ ಜಮೀನುಗಳು ಎಷ್ಟು (ಎಕರೆ / ಗುಂಟೆವಾರು ವಿವರ ನೀಡುವುದು);

ಇ) ಜಮೀನುಗಳ ಖಾತೆಯಾಗದೇ ಉಳಿದಿರುವ ಪ್ರಕರಣಗಳೆಷ್ಟು; ಇದಕ್ಕೆ ಕಾರಣಗಳೇನು (ಪ್ರಕರಣವಾರು ವಿವರ ನೀಡುವುದು)?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ – 3 ವರ್ಷಗಳಿಂದ ಭೂ ಕಂದಾಯ ಅಧಿನಿಯಮ 1964 ಕಲಂ 128, 129 ರಡಿಯಲ್ಲಿ ಖಾತೆ

ಬದಲಾವಣೆ ಮಾಡಲಾಗಿರುತ್ತದೆ. ಖಾತೆ ಬದಲಾವಣೆ ಮಾಡಿರುವ ಪ್ರಕರಣಗಳು ಒಟ್ಟು– 8635.

ಆ) ಮೇಲ್ಕಂಡ ಜಮೀನುಗಳ ಪೈಕಿ ನೆಲಮಂಗಲ ತಾಲ್ಲೂಕು ವ್ಯಾಪ್ತಿಯಲ್ಲಿ 8ಎ–01 1/2 ಗುಂಟೆ ಜಮೀನು ದರಖಾಸ್ತು ಮೂಲಕ ಮಂಜೂರಾತಿಯಾದ ಜಮೀನಿನ ಖಾತೆ ಬದಲಾವಣೆ ಮಾಡಲಾಗಿರುತ್ತದೆ ಹಾಗೂ 1ಎ 11. ಗುಂಟೆ ಇನಾಮತಿ ಜಮೀನಿನ ಖಾತೆ ಬದಲಾವಣೆ ಮಾಡಲಾಗಿರುತ್ತದೆ.

ಇ) 433 ಪ್ರಕರಣಗಳು ಖಾತೆಯಾಗದೆ ಬಾಕಿ ಉಳಿದಿರುತ್ತದೆ.

- 79ಎ ಮತ್ತು 79ಬಿ ರಡಿಯಲ್ಲಿ ವಿಚಾರಣೆಗೆ 77 ಪ್ರಕರಣಗಳು ಉಪ ವಿಭಾಗಾಧಿಕಾರಿಗಳ ಮುಂದೆ ಬಾಕಿ ಇರುತ್ತದೆ.
- ದಾಖಲಾಗಿರುವ ವಿವಾದಾಸ್ಪದ ಪ್ರಕರಣಗಳು 323
- ಸಂಯೋಜಿತ ಪೋಡಿಯಾಗಿ ಬಾಕಿ ಇರುವ ಪ್ರಕರಣಗಳು– 33

ಭೂ ಪರಿವರ್ತನೆ ಮಾಡಿರುವುದು

1059 (1163); ಶ್ರೀ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ರೈತರ ಭೂಮಿಗಳನ್ನು ಖರೀದಿಸಿ ನಿವೇಶನ ಬಡಾವಣೆಗಳನ್ನು ನಿರ್ಮಿಸಲು ಸರ್ವೆ ಮತ್ತು ಭೂ ಪರಿವರ್ತನೆಗೆ ತಾಲ್ಲೂಕು ಕಚೇರಿಗೆ ಬಂದಿರುವ ಅರ್ಜಿಗಳೆಷ್ಟು;

ಆ) ಇದರಲ್ಲಿ ವಿಲೇವಾರಿಯಾಗಿರುವ ಪ್ರಸ್ತಾವನೆಗಳೆಷ್ಟು; ಬಾಕಿ ಇರುವ ಪ್ರಸ್ತಾವನೆಗಳೆಷ್ಟು (ಭೂ–ಪರಿವರ್ತನೆಗೆ ಸ್ವೀಕೃತಿ ಮತ್ತು ವಿಲೇವಾರಿಯಾದ ದಿನಾಂಕ ಮತ್ತು ಅರ್ಜಿದಾರರ ವಿವರಗಳೊಂದಿಗೆ ಮಾಹಿತಿ ಒದಗಿಸುವುದು)?